

# ಡಾಕ್ಟರ್ ಸಾಹೇಬ್

## ರಾಮಮನೋಹರ ಲೋಹಿಯಾ ಜೀವನಯಾನ

■ ನಟರಾಜ್ ಹುಳಿಯಾರ್

ಕಲೆ: ಎಚ್.ಎಸ್. ಮೋನಪ್ಪ

# ದೇಶರಕ್ಷಕರೇ ದೇಶದ್ರೋಹಿಗಳು! ಮೊಳಗಿತು ಭೂಗತ ಬಾನುಲಿ!

4

ಎರಡನೇ ಮಹಾಯುದ್ಧದಲ್ಲಿ 'ಬ್ರಿಟಿಷ್ ಸಾಮ್ರಾಜ್ಯವಾದಿಗಳು ಹಾಗೂ ಜರ್ಮನ್ ನಾಝಿವಾದಿಗಳು ಇಬ್ಬರಿಂದಲೂ ಸಮಾನ ಅಂತರ ಕಾಯ್ದುಕೊಳ್ಳಬೇಕು' ಎಂಬ ಲೋಹಿಯಾ ನಿಲುವಿಗೆ ಕಾಂಗ್ರೆಸ್ಸಿನಲ್ಲಿ ಸ್ಪಂದನ ಸಿಗಲಿಲ್ಲ. ಯಾವುದೇ ರಾಜಕೀಯ ಸಂಸ್ಥೆಯ ಜೊತೆ ಕೆಲಸ ಮಾಡುವ ಸ್ವತಂತ್ರ ಚಿಂತಕನಿಗೆ ಎದುರಾಗುವ ಸವಾಲುಗಳು ಲೋಹಿಯಾಗೆ ಈ ಘಟ್ಟದಲ್ಲೇ ಶುರುವಾದವು.

ಈ ನಡುವೆ ಕಾಂಗ್ರೆಸ್‌ನಲ್ಲಿ ಬಗೆ ಬಗೆಯ ಹಿತಾಸಕ್ತಿಗಳು ಸೇರಿಕೊಂಡಿದ್ದವು. ಅಖಿಲ ಭಾರತೀಯ ಕಾಂಗ್ರೆಸ್ ಕಮಿಟಿಯು 'ಕಾಂಗ್ರೆಸ್ ಸೋಷಲಿಸ್ಟ್ ಪಾರ್ಟಿ'ಯ ಸದಸ್ಯರು ಕಾಂಗ್ರೆಸ್ ಪಕ್ಷದ ಯಾವ ಹುದ್ದೆಯಲ್ಲೂ ಇರುವಂತಿಲ್ಲ ಎಂದು ನಿರ್ಣಯ ಮಾಡಿತು. ಲೋಹಿಯಾ ಕಾಂಗ್ರೆಸ್ ವಿದೇಶಾಂಗ ವಿಭಾಗದ ಹುದ್ದೆ ಬಿಟ್ಟು ಕಲ್ಕತ್ತಾಕ್ಕೆ ಬಂದರು. ನಂತರದ ದಿನಗಳಲ್ಲಿ ಕಮ್ಯುನಿಸ್ಟರು 'ಕಾಂಗ್ರೆಸ್ ಸೋಷಲಿಸ್ಟ್' ಪಕ್ಷದ ಮೇಲೆ ಹಿಡಿತ ಸಾಧಿಸುತ್ತಿದ್ದುದನ್ನು ವಿರೋಧಿಸಿ ಅಚ್ಯುತ್ ಪಟವರ್ಧನ್, ಮೀನೂ ಮಸಾನಿ ಹಾಗೂ ಲೋಹಿಯಾ ಪಕ್ಷದಿಂದ ಹೊರ ಬಂದರು.

ಈಗ ಲೋಹಿಯಾ ಸ್ವತಂತ್ರ ಯೋಧನೂ, ಸೇನಾನಿಯೂ ಆದರು! 1938–39ರ ಮಹಾಯುದ್ಧದಲ್ಲಿ ಜರ್ಮನಿಯ ವಿರುದ್ಧ ಫ್ರಾನ್ಸ್–ಇಂಗ್ಲೆಂಡ್ ಒಂದಾದವು. ಯುದ್ಧ ಶುರುವಾಗಿತ್ತು. ಲೋಹಿಯಾ ತಮ್ಮ ನಿಲುವಿಗೆ ತಕ್ಕಂತೆ ಯುದ್ಧವಿರೋಧಿ ಪ್ರಚಾರ ಆರಂಭಿಸಿದರು:

'ಬ್ರಿಟಿಷ್ ಸಾಮ್ರಾಜ್ಯಶಾಹಿ, ಹಿಟ್ಲರ್‌ನ ಫ್ಯಾಸಿಸಂ ಎರಡೂ ಕೇಡಿನ ಶಕ್ತಿಗಳೇ; ಆದ್ದರಿಂದ ಭಾರತ, ಏಷ್ಯನ್ ಹಾಗೂ ಆಫ್ರಿಕನ್ ದೇಶಗಳು ಎರಡನ್ನೂ ವಿರೋಧಿಸಬೇಕು; ಈ ಇಬ್ಬರಲ್ಲಿ ಯಾರು ಗೆದ್ದರೂ ಗುಲಾಮಗಿರಿಗೆ ತುತ್ತಾದ ದೇಶಗಳಿಗಾಗಲೀ, ನ್ಯಾಯಯುತ ವ್ಯವಸ್ಥೆ ತರಲು ಜಗತ್ತಿನಲ್ಲಿ ನಡೆಯುತ್ತಿರುವ ಹೋರಾಟಕ್ಕಾಗಲೀ ಲಾಭವಿಲ್ಲ. ಈ ಯುದ್ಧವನ್ನು ಅಹಿಂಸಾತ್ಮಕ ಮಾರ್ಗದಿಂದ ಎದುರಿಸಬಹುದು.'

ಈ ಭಾಷಣ ಮಾಡಿದ್ದಕ್ಕೆ ರಾಜದ್ರೋಹ (ಸೆಡಿಶನ್) ಕಾಯ್ದೆಯಡಿ ಲೋಹಿಯಾ ಬಂಧನವಾಯಿತು. ಲೋಹಿಯಾ ಕಲ್ಕತ್ತಾದ ಕೋರ್ಟಿನಲ್ಲಿ ತಮ್ಮ ಪರವಾಗಿ ತಾವೇ ವಾದ ಮಂಡಿಸಿದರು. ಸರ್ಕಾರಿ ಲಿಪಿಕಾರನನ್ನು ಪಾಟಿ ಸವಾಲು ಮಾಡಿದರು:

